Regd No. M 1299 SATYAVADI Founded 1917

ಸತ್ಯವಾದಿ

(ಆರಮನೆ ಸೋಪ್ಸ್ (ಖಾಸ್) ಎಂ. ಪಿ. ಸುಬ್ಬರಾಯುಡಿಂದ ಸಕ್ಕಿಸಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 14] ಸೋಮವಾರ 6-10-47 [ಬಿಡಿ ಪ್ರತಿ 3 ಪೈ

ಒಳ್ಳೆಯ ಸಲಹೆ

' ಆಹಾರ ಪದಾರ್ಥಗಳ ಅಭಾವದ ಕಾರಣದಿಂದ ನಮ್ಮ ದೇಶದಲ್ಲಿ ' ರೇಷನ್ ' ಕಡಿಮೆ ಮಾಡಿದ್ದಾರೆ. ಬಹಳ ಕಷ್ಟವಾಗಿದೆ ' ಜನಗಳೆಲ್ಲರೂ ಎಲ್ಲೆಲ್ಲಯೂ ಮಾತಾಡುತ್ತಿದ್ದಾರೆ. ರೇಷನ್ ಕಡಿಮೆ ಮಾಡಿದುದರಿಂದ ಈ ಜನಗಳು ' ಕಷ್ಟ ' ಎಂದು ಹೇಳುವುದು ಉಚಿತವಲ್ಲ. ರೈಲ್ವೇ ಕೆಲಸಗಾರರಿಗೆ ನಿನ್ನೆ ತಿಂಗಳಿನಿಂದಲೂ ರೇಷನ್ ಕೂಡಾ ಇಲ್ಲವೆಂದು ಹೇಳುತ್ತಿದ್ದಾರೆ. ಅದರಲ್ಲಿಯಾರೂ ಸತ್ತಿಲ್ಲ. ಅವರ ಪಾಡಿಗೆ ಹೆಚ್ಚೊ ಕಮ್ಮಿಯೋ ದುಡ್ಡು ಕೊಟ್ಟು ಪದಾರ್ಥಗಳನ್ನು ತೆಗೆದುಕೊಂಡು ಊಟ ಮಾಡಿ ಬದುಕಿಕೊಂಡಿದ್ದಾರೆ. ರೇಷನ್ನು ಕೊಡದೇನೆ ಇದ್ದರೂ ಯಾರಿಗೂ ಏನೂ ಆಗಿಲ್ಲ. ಕಡಿಮೆ ಮಾಡಿದರಿಂದ ಆಗುವ ಪ್ರಳಯವೇನು ? ಅನವಶ್ಯಕವಾಗಿ ಸರ್ಕಾರದವರನ್ನು ದೂರುವ ಉದ್ದಿಶ್ಯದಿಂದಲೇ ಜನಗಳು ' ಕಷ್ಟ, ಕಷ್ಟ ' ಅನ್ನುತ್ತಿದ್ದಾರೆ.

ನಮ್ಮ ದೇಶದಲ್ಲಿ ' ಕಷ್ಟ ' ಅನ್ನುವುದಿಲ್ಲವೇ ಇಲ್ಲ. ಅನೇಕ ಲೋಕೋಪಕಾರಗಳು ಇರುವ ದೇಶ ಇದು. ' ಧರ್ಮಪ್ರಕಾಶ ' ' ಧರ್ಮಪ್ರವರ್ಧ ' ' ಧರ್ಮರತ್ನಾಕರ ' ' ಲೋಕಸೇವಾನಿರತ ' ' ಲೋಕೋಪಕಾರಿ ' ಇತ್ಯಾದಿ ಇತ್ಯಾದಿಗಳೆಲ್ಲರೂ ಇರುವುದು ನಮ್ಮ ದೇಶದಲ್ಲಿಯೇ. ರೇಷನ್ ಸಾಲದೆಂದು ಹೇಳುವ ಪ್ರತಿಯೊಬ್ಬರಿಗೂ ಅವರವರ ಹೊಟ್ಟೆಗೆ ಹಿಡಿಯುವಷ್ಟು ಅಕ್ಕಿ ಮೊದಲಾದ ಆಹಾರ ಪದಾರ್ಥಗಳನ್ನು ಕೈಯಲ್ಲಿ ಹಿಡಿಯುವಷ್ಟು ಹಣವನ್ನು ಪಡೆಕೊಂಡು ದಾನ ಮಾಡುತ್ತಿದ್ದಾರೆ ಅಂಥಾ ಮಹಾ ವಿಭೂತಿಗಳು ನಮ್ಮ ದೇಶದಲ್ಲಿ ಇರುವಷ್ಟು ಕಾಲವೂ ' ಕಷ್ಟ ' ಎನ್ನುವುದು ಅಸಂಭವ.

ಇನ್ನೊಂದು ವಿಷಯ. ಆಹಾರ ಪದಾರ್ಥಗಳ ಅಭಾವ ಹೆಚ್ಚಾದುದರಿಂದ ನಮ್ಮ ದೇಶದಲ್ಲಿ ಸಂಕಾರಿ ಅಧಿಕಾರಿಗಳಿಗೆ ವಿಶೇಷವಾಗಿ ಪೋಲೀಸರಿಗೆ ಹೆಚ್ಚಾಗುತ್ತಾ ಇದೆ ಆಹಾರಾಭಾವದ ಸಮಸ್ಯೆಯನ್ನು ಪರಿಹರಿಸಲು ಇದು ಒಳ್ಳೆಯ ಸಹಕಾರಿ. ಈಗ ಯಾವ ಪತ್ರಿಕೆಯನ್ನೇ ತೆಗೆದು ನೋಡಿದರೂ ಎಲ್ಲೆಲ್ಲಿಯಾದರೂ ' ಪೋಲೀಸರು ರಾತ್ರಿಯಿಂದ ಹೊಂಚಿದರು; ಗುಂಡು ಹಾರಿಸಿದರು ' ಎಂಬ ಸುದ್ದಿಗಳೇ ಪ್ರಕಟವಾಗುತ್ತಿವೆ. ನಾನು ಪೋಲೀಸರಿಗೆ ಒಂದು ಸೂಚನೆ ಕೊಡಬೇಕು ಎಂತ ಇದ್ದೇನೆ. ಆ ಸೂಚನೆ ಏಂದ್ರೆ ' ಏನೋ ಕೆಲಸ ಕೈ ಬಾರದೇ ಇರೋದು ' ಎಂದು ತಿಳಿಕೋಬೇಡಿ. ಬಹಳ ಅಮೂಲ್ಯವಾದದ್ದು ನಿಮಗೇ ಗೊತ್ತಾಗುತ್ತೆ. ಅದರ ಶ್ರೇಷ್ಠತೆ, ಘನತೆ, ಅಪೂರ್ವತೆ ಎಲ್ಲಾ.

ಪೋಲೀಸರು ಮೃದುವಾಗಿ, ಲಘುವಾಗಿ ಲಾಠಿಚಾರ್ಜು ಮಾಡಿ ಕೈಕಾಲು ಮುರಿದು ಹಾಕಿದರೆ ತಲೆಬುರುಡೆ ಒಡೆದು ಹಾಕೋದರಿಂದ ಉಪಯೋಗವಿಲ್ಲ. ಅನಾವಶ್ಯಕವಾಗಿ ಆಸ್ಪತ್ರೆ ಡಾಕ್ಟರಿಗೆ ಕೆಲಸ ಹೆಚ್ಚಾಗೋಕ್ಕೆ ದಾರಿ. ಸಾಧ್ಯವಾದಷ್ಟು ಡಾಕ್ಟರಿಗೆ ತೊಂದರೆ ಕೊಡಕೂಡದು. ಜನಗಳು ಎಲ್ಲಿ ಸೇರಿದ್ದಾರೋ ಅಲ್ಲಿ ಗುಂಡು ಹಾರಿಸಿ ಬಿಡಬೇಕು ಗುಂಡು ಹಾರಿಸಿ ಜಖಂ ಮಾಡಿ ಉಪಯೋಗವಿಲ್ಲ. ಹಾಕಿದ ಗುಂಡಿನೇಟಿಗೆ ಉಸಿರೇ ನಿಂತು ಹೋಗಬೇಕು. ಹಾಗೆ ಮಾಡಿದರೆ ಒಂದು ಕೆಲಸದಿಂದ ಎರಡು ಪ್ರಯೋಜನಗಳು. ಸುಲಭವಾಗಿ ಶಾಂತಿ ಸ್ಥಾಪನೆಯಾಗುವುದು ಒಂದು. ನಮ್ಮ ದೇಶದಲ್ಲಿ ಜನಸಂಖ್ಯೆ ಕಡಿಮೆಯಾದರೆ ಉಳಿದವರಿಗೆ ' ರೇಷನ್ ' ಹೆಚ್ಚು ಸಿಕ್ಕುತ್ತೋ ಇಲ್ಲವೋ ನೀವೇ ಹೇಳಿ, ಅವೇಲೆ ಆಹಾರ ಧಾನ್ಯಗಳಿ ಕೊರತೆ ಇರುವುದೇ ಇಲ್ಲ. ಹೇಗಿದೆ ನನ್ನ ಸಲಹೆ ?

ದಿವಾನರ ಸುಧಾರಣಾ ಸಲಹಾ ಸಮಿತಿಯವರು ಮಾಡಿರುವ ಸಲಹೆಗಳಿಗಿಂತ ನನ್ನ ಸಲಹೆ ಚೆನ್ನಾಗಿಲ್ಲವೇ ? ಅಹುದಾದರಹುದೆನ್ನಿ ಇಲ್ಲವಾದರಿಲ್ಲವೆನ್ನಿ ಮಲ್ಲ.

ವೈಡ್ ಲ್ಯಾಂಡ್ಸ್

ಆಮೋಘ 2 ನೇ ವಾರ

ರಂಜನ — ಜೀವ್ಸ್ — ಬೇಬಿ ಮಾಧುರಿ ಪಾತ್ರವಹಿಸಿರುವ

ನೈಮಾ

(ಆಮೋಘ ಹಿಂದಿ ಚಿತ್ರ)

ಪ್ರತಿದಿನ 3 ಆಟಗಳು

ಈ ವಾರದ ಭವಿಷ್ಯ

(ಓ॥ ಜ್ಯೋತಿಷ್ಯರಿಂದ)

ಮೇಷ — ಶತ್ರುಗಳಿಂದ ಸ್ವಲ್ಪ ತೊಂದರೆ. ಧನವ್ಯಯವಿರುವುದಿಲ್ಲ. ವ್ಯವಹಾರದಲ್ಲಿ ಚಿಂತೆ.

ವೃಷಭ — ಅನುಕೂಲವಾದ ವಾರ. ಆರೋಗ್ಯ ಉತ್ತಮ. ವ್ಯವಹಾರದಲ್ಲಿ ಜಯ.

ಮಿಥುನ — ಸುಖದಿಂದ ಕೂಡಿದ ವಾರ. ಉತ್ಸಾಹ, ಲಾಭ, ಆರೋಗ್ಯ ಚೆನ್ನಾಗಿರುತ್ತೆ.

ಕರ್ಕಾಟಕ — ಗ್ರಹಗತಿಗಳು ಸ್ವಲ್ಪ ಕ್ರೂರವಾಗಿವೆ. ದ್ರವ್ಯ ನಷ್ಟ, ಆರೋಗ್ಯಕ್ಕೆ ಧಕ್ಕೆಯಿಲ್ಲ. ದೋಷಾರೋಪಣೆಗೆ ಅವಕಾಶವಿದೆ.

ಸಿಂಹ — ಆರೋಗ್ಯವಿರುವುದಿಲ್ಲ, ವ್ಯವಹಾರದಲ್ಲಿ ತೊಂದರೆ.

ಕನ್ಯಾ — ಎಲ್ಲ ವಿಧದಲ್ಲೂ ಅನುಕೂಲವಾದ ವಾರ.

ತುಲಾ — ಶತ್ರುಗಳ ಭಯ ದೂರವಾಗುತ್ತೆ. ವ್ಯವಹಾರದಲ್ಲಿ ಅನುಕೂಲವುಂಟು

ವೃಶ್ಚಿಕ — ಶುಭ ಸೂಚಕವಾದವಾರವಿದು. ಹೆದರಬೇಡಿ. ಲಾಭವುಂಟು.

ಧನಸ್ಸು — ಜಯದಿಂದ ಕೂಡಿದವಾರವಿದು. ಆರೋಗ್ಯವು ಉತ್ತಮವಿರುವುದಿಲ್ಲ.

ಮಕರ — ಪ್ರಯತ್ನಗಳು ವಿಫಲವಾಗುವುದು. ಆರ್ಥಿಕ ಸ್ಥಿತಿಯು ಮಂದವಾಗಿರುತ್ತದೆ. ವ್ಯವಹಾರದಲ್ಲಿ ಧನವ್ಯಯ.

ಕುಂಭ — ಕಾರ್ಯ ಸಾಧನೆಯೋಗವಿರುವ ವಾರ. ಆರ್ಥಿಕ ಆರೋಗ್ಯ ಉತ್ತಮ.

ಮೀನ — ಅನುಕೂಲವಾದ ವಾರ. ಕಷ್ಟಗಳು ದೂರವಾಗುವುದು. ಆನಂದಾರೋಗ್ಯವುಂಟು.

ವೃತ್ತಾಂತ ಸಂಗ್ರಹ

ಅರವತ್ತೆಮುಂದೆ ಸತ್ಯಾಗ್ರಹಕ್ಕಾಗಿ ಹೊರಟ ನಾಲ್ಕು ಮಂದಿ ಕೊಯಮ್ಬತ್ತೂರು ಸತ್ಯಾಗ್ರಹಿಗಳು ನಿನ್ನೆ ರಾತ್ರಿ ದೇವರಾಜ ಮಾರ್ಕೆಟ್ ಚೌಕದಲ್ಲಿ ದಸ್ತಗಿರಿ ಯಾದರು. ಜನರನ್ನು ಚದರಿಸುವಾಗ ಹಲವರಿಗೆ ಲಾಟಿ ಏಟು ಬಿದ್ದವು. ನೂರಡಿ ರಸ್ತೆಯಲ್ಲಿ ಪೋಲೀಸ್ ವ್ಯಾನಿಗೆ ಕಲ್ಲು ನೋಟುಗರು ತಂಬಾ ಬಿದ್ದವು.

ಬೆಂಗಳೂರು ಅ. 4 — ಮುಸ್ಲಿಮರ ಮಾಡಿರುವ ಧ್ವನ್ಸ ಕಾರ್ಯಗಳಿಂದ ಸಕ್ಕಿ ಹುಟ್ಟು ಮಕ್ಕಳು ಮಕ್ಕಳು ಧ್ವನ್ಸ ಕಾರ್ಯದಿಂದ ದಿವಾನ್ ಬಂಗಲೆಗೆ ರೇಷನ್ ಕೊಡಿಸಬೇಕೆಂದು ವೆಂಕಣ್ಣಗೆ ಹೋದರು. ಪೋಲೀಸರು ಇವರನ್ನು ಹಿಂಬಾಲಿಸಿ ನಾಳೆಯಿಂದ ರೇಷನ್ ಕೊಡಿಸುವುದಾಗಿ ಭರವಸೆಯಿತ್ತು ಹಿಂದುರಿಸಿದರು.

ಕಾಂಗ್ರೆಸ್ ಮುಖಂಡರ ಬಿಡುಗಡೆ ಮತ್ತು ಜನರ ಅಶಾಕಾರಾಂಕ್ಷೆ ಈಡೇರಬೇಕೆಂದು ಇವತ್ತಿನಿಂದ ಪಾರ್ಶ್ವನಾಥ್ ಹಿಳ್ಳಿಯಲ್ಲಿ 9 ದಿನ ಉಪವಾಸ ಮಾಡಲಿದ್ದಾರೆ.

ಮುನ್ನೂರು ಮಂದಿ ಸತ್ಯಾಗ್ರಹಿಗಳು ಕೊಡುತ್ತಿರುವ ಆಹಾರ ಸರಿಯಿಲ್ಲವೆಂದು ತಾ॥ 2 ರ ರಾತ್ರಿಯಿಂದ ವೆಲ್ಲೂರು ಸೆರೆಮನೆಯಲ್ಲಿ ಉಪವಾಸವಾರಂಭಿಸಿದ್ದಾರೆ ಎಂದು ತಿಳಿಯಬಂದಿದೆ.

ಅನೇಕ ಮಂದಿ ಚಿಕ್ಕವರು ಕೆಟ್ಟ ಆಹಾರಪದಾರ್ಥಕ್ಕೆ ಅನುಶಂಕೆ ಮುತ್ತಿತರ ಬಾಯಿಬೆಯಿಂದ ಸರಳುತ್ತಿದ್ದಾರೆ.

(ಫ್ರೀ ಪ್ರೆ ಜ)

ಭಾರತದ ಗಲಭೆ ಬಗ್ಗೆ ಟೋರಿ ಪರಿಷತ್ತಿನಲ್ಲಿ ಲೇಬರ್ ಸರ್ಕಾರವನ್ನು ಚರ್ಚಿಲ್ ಟೀಕಿಸಿರುವರು.

ನವದೆಹಲಿ ಅ 3 — ಪಶ್ಚಿಮ ಬಂಗಾಳ ಸರ್ಕಾರವು ಕಲ್ಕತ್ತಾ ಎಲೆಕ್ಟ್ರಿಕ್ ಕಂಪೆನಿಯನ್ನು ಕೊಳ್ಳಲು 30 ಕೋಟಿ ರೂ ಸಾಲವನ್ನು ಭಾರತ ಸರಕಾರವು ಅನುಕೂಲವಾಗಿ ಯೋಚಿಸಬಹುದೆಂದು ಹೇಳಲಾಗಿದೆ.

ಕಲ್ಕತ್ತಾ ಅ 3— ಪಶ್ಚಿಮ ಬಂಗಾಳದಲ್ಲಿ ಕಾಳಸಂತೆ ವ್ಯಾಪಾರಿಕಲು ಅರ್ಡಿನೆನ್ಸ್ ತೆಗೆಯುವಂತಾಗಿದ್ದಾರೆ

ನವದೆಹಲಿ ಅ 5— ಭಾರತ ಸರಕಾರವು ಕಾಥಿವಾಡ ಸಂಸ್ಥಾನಗಳ ಕೇಳಿಕೆಯಂತೆ ಪೋರ್ಬಂದರಿಗೆ ಸೈನ್ಯ ಕಳುಹಿಸಿದೆ.

At Opera From 4-10-47

PHANTOM

(Serial)

Edited, Printed and Published by M. S Krishna Rao at the Satyavadi Press Chamaarja Agrahar Mysore.

ಶಾ॥ 6-10-47 ॥ಶ್ರೀ॥ ನಂ. 56

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಪ್ರಬೋಧದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ; ಗುಂಡ್ಕಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇಗಾಗಮವಿಶಾರದ
ಸಂಘದ ಕಾರ್ಯದರ್ಶಿ, ದೊಡ್ಮನೆ ಸಪ್ಪುರಂ, ಶಿವಮೊಗ್ಗಾ ಜಿಲ್ಲಾ

ಭಕ್ತ ಪರ್ವತದಾಸ್

ಭಕ್ತ ನರಸಿಂಹ ಮೆಹತನ ಸಂಸರ್ಗದಿಂದ ಪರ್ವತದಾಸನಲ್ಲಿ ಹೊಸ ಜೀವನವು ಪ್ರಾಪ್ತವಾಗಿದ್ದಿತು. ಪ್ರತಿ ವರ್ಷ ಆರಾರು ತಿಂಗಳು ಬಲಗೈಯಲ್ಲಿ ತುಳಸೀಯನ್ನು ಹಿಡಿದುಕೊಂಡು ದ್ವಾರಕಿಗೆ ಹೋಗಿ, ಗೋಮತಿಯಲ್ಲಿ ಮಿಂದು, ತುಳಸೀಪತ್ರವನ್ನು ದ್ವಾರಕಾಧೀಶನಿಗರ್ಪಿಸಿ, ಸಂದರ್ಶನ ಮಾಡಿ, ಮನೆಗೆ ಬರಬೇಕು ಎಂದು ಪರ್ವತದಾಸನು ಪ್ರತಿಜ್ಞೆ ಮಾಡಿ, ಅದರಂತೆ ನಡೆಯುತ್ತಾ ಬಂದನು. ಅಂತೆಯೇ ವಯಸ್ಸಿನ ವರೆಗೆ ಈ ಪ್ರತಿಜ್ಞೆಯು ನಿರ್ವಿಘ್ನವಾಗಿ ನಡೆಯಿತು. ಆದರೆ ಈಗ ವಾರ್ಧಕ್ಯದಿಂದ ಶರೀರವು ಕ್ಷೀಣಿಸುತ್ತಾ ಬಂದು ನಡೆಯುವ ಶಕ್ತಿಯು ಇಲ್ಲವಾಯಿತು. ಆದರೂ ತನ್ನ ಪ್ರತಿಜ್ಞೆಯನ್ನು ನೆಂಪೇರಿಸಲು ನಿಶ್ಚಯಿಸಿದನು. ಒಂದು ಸಂಘವು ದ್ವಾರಕೆಗೆ ಹೋಗುತ್ತಿತ್ತು, ಅದರೊಂದಿಗೆ ಪರ್ವತದಾಸನು ಹೊಂಟನು. ನೂರಿಪ್ಪತ್ತು ಬಹಳ ತಡೆದರೂ ಪರ್ವತದಾಸನು ಹೇಳಲಿಲ್ಲ. ಗಾಬರಿಯಿಂದ ಮೂರು ಹಗಾವುದ ದೂರ ಹೋಗಿದ್ದನು. ಅಷ್ಟಕ್ಕೇ ಸಾಕಾಯಿತು. ಉಸಿರು ಸಿಕ್ಕಿಕೊಂಡು, ಮುಂದೆ ನಡೆಯಲಾರದಾದನು. ಅಲ್ಲೊಂದು ಛಾವಿ ಇದ್ದಿತು. ಅದರ ಬಳಿ ಪರ್ವತದಾಸನು ಸ್ವಲ್ಪ ವಿಶ್ರಾಂತಿಗೆ ನಿಂತನು. ಅಲ್ಲೇ ನಿದ್ರೆಯೂ ಬಂದಿತು. ಪರ್ವತದಾಸನು ದ್ವಾರಕೆಯ ವರೆಗೆ ಬರಲು ಸಾಧ್ಯವಿಲ್ಲವೆಂದು ತಿಳಿದು ಸಂಘವು ಪರ್ವತದಾಸನು ಸಿದ್ಧಿಸುತ್ತಿದ್ದಾಗ, ಮುಂದೆ ಹೊರಟು ಹೋಯಿತು. ಆ ಶರಣಾರ್ಥಕನಾದ ಭಗವಂತನು ಪರ್ವತದಾಸನಿಗೆ ಸ್ವಪ್ನದಲ್ಲಿ 'ಗೋಮತಿಯೊಂದಿಗೆ ನಾನೇ ಹಿಂದು ತಿಂಗಳಲ್ಲಿ ನಿನ್ನಲ್ಲಿಗೆ ಬರುತ್ತೇನೆ. ಈಗ ಮನೆಗೆ ಹೋಗು' ಎಂದು ಹೇಳಿದನು. ನಿದ್ರೆಯಿಂದ ಎಚ್ಚೆತ್ತ ಪರ್ವತದಾಸನ ಕನಸನ್ನು ಸ್ಮರಿಸಿಕೊಂಡು, ತನ್ನ ಊರಾದ ಮಾಂಗರೋಳಕ್ಕೆ ಹಿಂದಿರುಗಿದನು. ಆದರೆ ಭಗವಂತನ ಆಜ್ಞೆಯಿಂದ ಹಿಂದಿರುಗಿದ್ದಾನೆಂಬುದು ಬೇರೆಯವರಿಗೇನು ಗೊತ್ತು? ಒಬ್ಬೊಬ್ಬರು ಒಂದೊಂದು ವಿಧವಾಗಿ ಹೇಳತೊಡಗಿದರು — 'ಏನಪ್ಪಾ! ನೀನು ಒಂದೇ ದಿನದಲ್ಲಿ ದ್ವಾರಕಾ ಯಾತ್ರೆ ಮಾಡಿಕೊಂಡು ಬಂದು ಬಿಟ್ಟೆಯಾ?' 'ಹೇಗೆ ಹೋಗಿದ್ದಿ, ಹೇಗೆ ಬಂದಿ?' 'ಪ್ರಭುವು ನಿನ್ನನ್ನು ಕರೆದೊಯ್ಯಲು ಗರುಡನನ್ನು ಕಳಿಸಿದ್ದನೇ?'

ಜನಗಳು ಏನೇ ಅನ್ನುತ್ತಿದ್ದರೂ ಪರ್ವತದಾಸನಿಗೆ ಆದರ ಪರವೆ ಇಲ್ಲ. ಆತನು ದಿನಗಳನ್ನು ಎಣಿಸುತ್ತಿದ್ದನು — ಹೂಂ, ಇನ್ನು, ಇಪ್ಪತ್ತೊಂಬತ್ತು ದಿನ ಉಳಿಯಿತು. ಊ, ಈಗಿನ್ನು ಇಪ್ಪತ್ತೆಂಟು ಉಳಿಯಿತು ಹೀಗೇ ದಿನ ಲೆಕ್ಕ ಮಾಡುತ್ತಾ ಒಂದು ವಾರ ಕಳೆಯಿತು. 'ಎಂಟನೇ ದಿನ ದೀವ ದ್ವೀಪದಿಂದ ಸಿಂಹಾಸನವು ನನ್ನಲ್ಲಿಗೆ ಬರುವುದೆ' ಎಂದೂ ಕನಸಾಗಿದ್ದಿತು. ಆದ್ದಿಂದ ಎಂಟನೇ ದಿನ ಸಿಂಹಾಸನ ಒರುವ ದಾರಿ ಕಾದು ನೋಡುತ್ತಿದ್ದನು.

ಇದರಲ್ಲೂ ಒಂದು ಸೋದಿಗ ದೀವದಲ್ಲಿ ವಾಸುದೇವನೆಂಬೊಬ್ಬ ಭಕ್ತನಿದ್ದನು. ಈತನು ದ್ವಾರಕಾಧೀಶನಿಗಾಗಿ ಒಂದು ಸಿಂಹಾಸನವನ್ನು ತಯಾರಿಟ್ಟಿದ್ದನು. ಅದನ್ನೊಂದು ಹಡಗಿನಲ್ಲಿಟ್ಟು ದ್ವಾರಕೆಗೊಯ್ಯುತ್ತಿರಲು ಒಂದು ರಾತ್ರಿ ಕನಸಿನಲ್ಲಿ 'ಸಿಂಹಾಸನವನ್ನು ಮಾಂಗರೋಳಕ್ಕೆ ತೆಗೆದುಕೊಂಡು ಹೋಗು. ಅಲ್ಲಿ ಇರು ನಾನು ಅಲ್ಲಿಗೆ ಬರುತ್ತೇನೆ' ಎಂದು ಭಗವಂತನು ಆಜ್ಞೆ ಮಾಡಿದನು. ಕೂಡ್ಲೆ ವಾಸುದೇವನೆಂಬ ಭಕ್ತನು ಎಚ್ಚೆತ್ತು ಕನಸನ್ನು ಇತರರಿಗೆ ತಿಳಿಸಿದನು. ಆದರೆ ಯಾರೂ ಇದನ್ನು ನಂಬಲಿಲ್ಲ. ಹಡಗು ದ್ವಾರಕೆಗೆ ಪ್ರವೇಶಿಸುವುದರಲ್ಲಿತ್ತು. ಮಾಂಗರೋಳದ ಸಿಂಹಾಸನವು ಹೋಗಬೇಕೆಂದು ಭಗವಂತನ ಇಚ್ಛೆ ಇದ್ದದ್ದರಿಂದ ಕೂಡ್ಲೆ ಬಿರುಗಾಳಿ ಎದ್ದಿತು. ಸಮುದ್ರವು ಅಲ್ಲೋಲ ಕಲ್ಲೋಲವಾಗಿ, ಹಡಗು ನಾವಿಕರ ವಶದಿಂದ ತಪ್ಪಿ, ಎತ್ತೋ ಹೊರಟು ಹೋಯಿತು. ದೈವೇಚ್ಛೆಯಂತೆ ಹಡಗು ಮಾಂಗರೋಳದ ತೀರಕ್ಕೆ ಹೋಗಿ ನಿಂತಿತು. ಆಗ ವಾಸುದೇವನಿಗೆ ಬಹಳ ಆಶ್ಚರ್ಯವಾಯಿತು. ಕನಸು ನಿಜವೆಂದು ಮುಂದಟ್ಟಾಯಿತು. ವಾಸುದೇವನು ಮಾಂಗರೋಳದಲ್ಲಿ ಛಿದ್ರ 'ಪರ್ವತದಾಸನೆಂಬ ಭಕ್ತನೆಲ್ಲಿದ್ದಾನೆ' ಎಂದು ಹುಡುಕಿದನು. ಇತ್ತ ಪರ್ವತದಾಸನು ಎಂಟನೇ ದಿನ ಸಿಂಹಾಸನದ ಬರುವಿಕೆಯನ್ನು ಪ್ರತೀಕ್ಷಿಸುತ್ತಿದ್ದನು. ಪ್ರತಿಜ್ಞೆಗೆ ಸರಿಯಾಗಿ ಸಿಂಹಾಸನವು ಒಂದೇ ಬಂದಿತು. ನೋಡಿ ಭಕ್ತನ ಆನಂದಕ್ಕೆ ಪಾರವೇ ಇಲ್ಲ. ಊರವರೆಲ್ಲರೂ ಸೋಜಿಗಗೊಂಡರು. ಜನರೆಲ್ಲರಿಗೂ ಈಗ ನಂಬಿಕೆಯಾಯಿತು.

ಇನ್ನು ಗೋಮತಿಯೊಂದಿಗೆ ದ್ವಾರಕಾಧೀಶನು ಯಾವಾಗ ಬರುತ್ತಾನೆಂದು ಎಲ್ಲರೂ ಕಾಯತೊಡಗಿದರು. ಪ್ರತಿಜ್ಞೆಗೆ ಸರಿಯಾಗಿ ಮರುವತ್ತನೇ ದಿನ ರಾತ್ರಿ ಪರ್ವತದಾಸನ ಮನೆ ಬಳಿಯ ಛಾವಿಯು ತಾನಾಗಿ ಉಕ್ಕಿ ನೀರು ಬೀಳಲೆ ಬರತೊಡಗಿತು. ಬೆಳಗ್ಗೆ ಜನರಿದನ್ನು ಕಂಡರು. ಎಲ್ಲರೂ ಗೋಮತಿಯು ಬಂದಳೆಂದು ಸಂತೋಷಿಸುತ್ತಾ ಹೋಗಿ ನೋಡಿದರು. ಇನ್ನು ದ್ವಾರಕಾಧೀಶನು ಬರುವುದೊಂದು ಉಳಿಯಿತು. ಪ್ರಭುವಿನ ಪ್ರೇಮಕ್ಕೆಯಾಗಿ ಪರ್ವತದಾಸನು ಅದೇ ಛಾವಿಯೊಳಗಿಳಿದನು. ಪ್ರತಿಜ್ಞೆಯು ನೆರವಾಯಿತು. ದ್ವಾರಕಾಧೀಶನ ಮೂರ್ತಿಯು ಸಿಕ್ಕಿತು. ಸಂತೋಷದಿಂದ ಪರ್ವತದಾಸನು ಮೂರ್ತಿಯನ್ನು ತೆಗೆದುಕೊಂಡು ನೀರಿಲಿ ಬಂದನು. ಎಲ್ಲರೂ ಆನಂದದಿಂದ ಕೂಡಿ ಹಿಗ್ಗಿದರು.

Save the Cow

ಗೋ ವಧೆ ನಿಲ್ಲಲಿ

ಭಕ್ತ ವ್ಯಾಧ

(ಸನ್ಮಾರ್ಗ)

(ಹಿಂದಿನ ಸೋಮವಾರದ ಸಂಚಿಕೆಯಿಂದ ಮುಂದುವರಿದುದು)

ಪಕ್ಷಿಗಳ ಸತ್ಯಪ್ರತಿಜ್ಞೆಯಿಂದಲೂ ತನ್ನ ಶಿವರಾತ್ರಿ ವ್ರತದಿಂದಲೂ ವ್ಯಾಧನ ಮನಸ್ಸು ತೀರ ಮಾರ್ಪಟ್ಟು ಹೋಗಿದ್ದಿತು. ಅವನು ತನ್ನ ಕರ್ಮಕ್ಕಾಗಿ ಪಶ್ಚಾತ್ತಾಪಿಸುತ್ತಿದ್ದನು. ಇಗ ಒಂದು ಪಶುವಿನ ಇಷ್ಟು ಸತ್ಯನಿಷ್ಠೆಯನ್ನು ನೋಡಿ, ಮತ್ತೂ ಕಾತರನಾಗಿಹೋಗಿ ಬಿಕ್ಕಿ ಬಿಕ್ಕಿ ಅಳಲಿಕ್ಕಾರಂಭಿಸಿದನು.

'ನಿಜವಾಗಿಯೂ ನೀವುಗಳು ಧನ್ಯರು! ನನ್ನ ಜ್ಞಾನನೇತ್ರಗಳನ್ನು ನೀವೇ ತೆರೆಸಿದಿರಿ. ನನಗೀಗ ಸಂಸಾರವೂ ಮಿಥ್ಯೆಯಾಗಿ ತೋರುತ್ತಿದೆ. ಹಂತೃವಾಗಲೀ ಹಂತವ್ಯವಾಗಲೀ ಯಾವುದೂ ಹೊಳೆಯುವುದಿಲ್ಲ. ಎಲ್ಲದಂಲ್ಲಿಯೂ ಒಂದೇ ಒಂದು ತತ್ವ ಕುಳಿತಿರುವುದು ಕಾಣಿಸುತ್ತಿದೆ ಒಂದು ವೇಳೆ ನಾನು ಯಾರನ್ನಾದರೂ ಕೊಲ್ಲುವುದಾದರೆ ನನ್ನನ್ನೇ ಕೊಲ್ಲಬಲ್ಲೆ. ಹೋಗಿರಿ ನೀವುಗಳು ಸುಖವಾಗಿ ಇದ್ದುಕೊಳ್ಳಿರಿ. ಲೋಕವು ಸುಖವಾಗಿರಲಿ, ಅದಕ್ಕೆ ಯಾವುದೇ ಬಗೆಯ ವ್ಯಾಧಿಗಳು ಬಾಧಿಸಲಿ, ಎಲ್ಲರೂ ಒಳ್ಳಿತನ್ನೇ ಕಾಣಲಿ, ದುಃಖವು ಲೋಕದಿಂದ ದೂರವಾಗಲಿ' 'ಸರ್ವೇಽತ್ರೈವ ಜಿತಃಸರ್ಗಸ್ತು ಸರ್ವೇಸಾಮನುಯಾತಃ| ಸರ್ವೇಭವಂತ್ಯಣಿಪತ್ಯಸ್ತು ಮಾ ಕಶ್ಚಿದ್ದುಃಖಭಾಗ್ಭವೇತ್ ॥'— ವ್ಯಾಧನು ಉಸುರಿದನು.

ಇಷ್ಟರಲ್ಲಿ ಶಿವಲೋಕದಿಂದ ವಿಮಾನವೂ ಬಂದಿತ್ತು. ಎಲ್ಲರೂ ತಮ್ಮ ತಮ್ಮ ನಶ್ವರ ಕಳೇಬರಗಳನ್ನು ತೊರೆದು, ದಿವ್ಯ ದೇಹಗಳಿಂದ ವಿಮಾನದಲ್ಲಿ ಹೋಗಿ ಕುಳಿತರು. ಆಕಾಶದಲ್ಲಿ ದುಂದುಭಿಗಳು ಬಾರಿಸಲ್ಪಡಲೊಡಗಿದುವು. ದೇವತೆಗಳು ಇವರ ಮೇಲೆ ಪುಷ್ಪಗಳಿಗೆರೆಯಲಾರಂಭಿಸಿದರು. ಸದಾಶಿವನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ— 'ಶಿವ ಹರ ಶಿಖ್ಯಂ ಗೌರೀಶಂ ವಂದೇ ಗಜ್ಜಾಧುವಾಹನಂ | ರುದ್ರಂ ಶಂಕರಂ ಶಿವಾಶಾನಂ ಕಲ್ಯಂ ಕಾಶೀಪುರನಾಥಂ ಮಾಂ' ಎಂದು ಹೇಳುತ್ತಾ ವ್ಯಾಧನು ಶಿವಲೋಕಕ್ಕೆ ತೆರಳಿದನು.